ಸಿ.ಸಿ. ಸಂ.*13/2017*

**ಪಿಡಬ್ಲ್ಯೂಃ** *07*

**ಇಂದು ದಿಃ***12.07.2024* **ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು ಃ ಆರೋಪಿ ಪರ ಶ್ರೀ.ಸಿ.ಕೆ.ಎಂ. ವಕೀಲರಿಂದಃ**

ಆರೋಪಿ ನನಗೆ ನೇಮಕಾತಿ ಪತ್ರ ಕೊಟ್ಟಿದ್ದರು. ಆ ಸಮಯದಲ್ಲಿ ಯಾರು ವ್ಯವಸ್ಥಾಪಕ ಧರ್ಮದರ್ಶಿ ಆಗಿದ್ದರು ಎಂದು ಗೊತ್ತಿಲ್ಲ. ನಾನು ಕೆಲಸಕ್ಕಾಗಿ ಅಶಜಿ ಸಲ್ಲಿಸುವಾಗ ಆರೋಪಿ ಹೆಸರನ್ನು ವ್ಯವಸ್ಥಾಪಕ ಧರ್ಮದರ್ಶಿ ಎಂದು ನಮೂದಿಸಿ ಅರ್ಜಿ ಸಲ್ಲಿಸಿದ್ದೆ. ಆರೋಪಿ ಮ್ಯಾನೇಜಿಗ್ ಟ್ರಸ್ಟಿ ಆಗಿರುವುದು ನನಗೆ ಗೊತ್ತಿಲ್ಲ. 5-6 ವರ್ಷ ಕಳೆದ ನಂತರ ಫಿರ್ಯಾದಿ ಶಾಲೆ ಶುರುವಾದ ಕಾಲದಿಂದಲೂ ಮ್ಯಾನೇಜಿಗ್ ಟ್ರಸ್ಟಿ ಅಂತ ತಿಳಿಯಿತು. ಶಾಲೆಯ ಹಣ ಕಾಸೀನ ವ್ಯವಹಾರಗಳನ್ನು ನೋಡಿಕೊಳ್ಳುವ ಬಗ್ಗೆ ಆರೋಪಿಗೆ ವಹಿಸಿರುವ ಬಗ್ಗೆ ಯಾವುದೇ ದಾಖಲೆ ನೋಡಿಲ್ಲ. ಈಗಲೂ ಸಹಾ ಫಿರ್ಯಾದಿ ಇಡಿ ಶಾಲೆಯ ಮುಖ್ಯಸ್ಥರು ಎಂದರೆ ಸರಿ. ಅವರ ಅಪೇಕ್ಷಯಂತೆ ನ್ಯಾಯಾಲಯಕ್ಕೆ ಸಾಕ್ಷ್ಯ ಹೇಳಲು ಬಂದಿದ್ದೇನೆ ಎಂದರೆ ಸರಿ. ಮಿಳಿಂದ ಶಾಲೆಯೆಲ್ಲಾ ನೌಕರ ವರ್ಗದವರು ಫಿರ್ಯಾದಿ ಹೇಳಿದಂತೆ ನಡೆದುಕೊಳ್ಳುತ್ತಾರೆ ಎಂಬುದು ಸರಿ. ನನ್ನ ವಿರುದ್ಧ ಇದೇ ನ್ಯಾಯಾಲಯದಲ್ಲಿ ಕ್ರಿಮಿನಲ್ ಪ್ರಕರಣ ಇದೆ ಎಂದರೆ ಸರಿ. ಮಕ್ಕಳಿಗೆ ಕೊಡಬೇಕಾಗಿದ್ದ ದವಸದಾನ್ಯಗಳನ್ನು ಕದ್ದು ಸಾಗಿಸುತ್ತಿದ್ದೆ ಎಂಬ ಆರೋಪದ ಮೇಲೆ ನನ್ನ ಕೇಸು ಇದೆ ಎಂದರೆ ಸರಿ. ಶಾಲಾ ವಿದ್ಯಾರ್ಥಿಗಳು ಅಭಿವೃದಿ ಶುಲ್ಕವನ್ನು ಸಂಬಂಧಪಟ್ಟ ತರಗತಿ ಶಿಕ್ಷಕರಿಗೆ ಕೊಡುತ್ತಿದ್ದರು. ಆ ಬಗ್ಗೆ ರಸೀದಿ ಕೊಡುತ್ತಿರಲಿಲ್ಲ. ಆ ರೀತಿ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಶುಲ್ಕವನ್ನು ಆರೋಪಿ ಕೈಗೆ ಕೊಡಬೇಕು ಎಂಬ ಆದೇಶ ನಾನು ನೋಡಿಲ್ಲ. ಮಿಳಿಂದ ಶಾಲೆಯ ಯಾವುದೇ ಆಡಳಿತ ಕೆಲಸ ಕಾರ್ಯಗಳು ಆಗಬೇಕಾದರೆ ಆಡಳಿತ ಮಂಡಳಿಯವರ ಆದೇಶದಂತೆ ಆಗಬೇಕು ಎಂದರೆ ಸರಿ. ಶಾಲಾ ವಿದ್ಯಾರ್ಥಿಗಳಿಂದ ಮಾಸಿಕ ಶುಲ್ಕವನ್ನು ತರಗತಿ ಶಿಕ್ಷಕರಿಂದ ಸಂಗ್ರಹಿಸಿಕೊಂಡು ಅದನ್ನು ಆರೋಪಿ ಕೈಗೆ ಕೊಡುತ್ತಿದ್ದರು. ಆ ರೀತಿ ಸಂಗ್ರಹಿಸಿದ ಹಣವನ್ನು ಆರೋಪಿ ಕೈಗೆ ಕೊಡಬೇಕು ಎಂದು ಆಡಳಿತ ಮಂಡಳಿಯಿಂದ ಆಗಿರು ಆದೇಶವನ್ನು ನಾನು ನೋಡಿಲ್ಲ. ಆರೋಪಿ ಮೈಸೂರಿನ ಮಹರಾಣಿ ಕಾಲೇಜಿನಲ್ಲಿ professor ಆಗಿ ನಿವೃತ್ತರಾಗಿದ್ದಾರೆ ಎಂದರೆ ಸರಿ. ಶಾಲಾ ವಾಹನವನ್ನು ಖರೀದಿಸಲು ಶಾಲಾ ಶಿಕ್ಷಕರಿಂದ ವಂತಿಕೆ ಸಂಗ್ರಹಿಸಲು ಆಡಳಿತ ಮಂಡಳಿಯಿಂದ ಠರಾವು ಆಗಿರಲಿಲ್ಲ.

ಆ ರೀತಿ ಸಂಗ್ರಹಿಸಿದ್ದ ಹಣವನ್ನು ನನ್ನ ಕೈಗೆ ಕೊಡಬೇಕು ಎಂದು ಆರೋಪಿಯನ್ನು ಹೊರತು ಪಡಿಸಿ ಬೇರೆ ಯಾರು ಆದೇಶ ಮಾಡಿರಲಿಲ್ಲ. ಆ ರೀತಿ ಸಂಗ್ರಹಿಸಿದ ಹಣವನ್ನು ಆರೋಪಿ ಕೈಗೆ ಕೊಡಬೇಕೆ ಅಥವಾ ಬೇಡವೇ ಎಂಬುದರ ಬಗ್ಗೆ ವ್ಯವಸ್ಥಾಪಕ ಧರ್ಮದರ್ಶಿ ಆಗಿದಂತಹ ಗೋವಿಂದಯ್ಯ ರವರಿಗೆ ಕೇಳಲು ತೊಂದರೆ ಇತ್ತೆ ಎಂದರೆ ಅವರ ಬಗ್ಗೆ ನನಗೆ ಗೊತ್ತಿರಲ್ಲಿ ಆದ್ದರಿಂದ ಕೇಳಿರಲಿಲ್ಲ. ದಿನಾಂಕಃ 25-05-2006 ರಂದು ಆರೋಪಿ ಕೈಗೆ 25 ಸಾವಿರ ನಂತರ ಪ್ರತಿ ತಿಂಗಳು ರೂ.3000, 4000, 10,000 ಮತ್ತು 13,000 ಈ ರೀತಿಯಾಗಿ ಸಂಗ್ರಹಿಸಿ ಕೊಟ್ಟಿದ್ದೇವೆ. ಆ ರೀತಿ ಹಣ ಸಂಗ್ರಹಿಸಿ ಕೊಡುವ ಕಾಲಕ್ಕೆ ನಾನು ಕೆಲಸಕ್ಕೆ ಸೇರಿ 7 ವರ್ಷಗಳು ಆಗಿತ್ತು. ನಾವು ಕೊಟ್ಟಿರುವ ಹಣಕ್ಕೆ ರಸೀದಿ ಕೊಡಬೇಕು ಎಂದು ನಾವು ಆರೋಪಿಯನ್ನು ಕೇಳಿದ್ದೇವು ಆದರೆ ಅವರು ಕೊಟ್ಟಿರಲಿಲ್ಲ. ನಾವು ಕೊಟ್ಟಿರುವ ಹಣಕ್ಕೆ ರಸೀದಿ ಕೊಡದಿದ್ದರೆ ಮುಂದೆ ನಾವು ಹಣ ಕೊಡುವುದಿಲ್ಲವೆಂದು ಆರೋಪಿಗೆ ಹೇಳಲು ತೊಂದರೆ ಇತ್ತೇ ಎಂದರೆ ಅವರು ನಮ್ಮನು ಕೆಲಸದಿಂದ ತೆಗೆದುಹಾಕುತ್ತಾರೆ ಎಂಬ ಭಯದಿಂದ ಕೇಳಲಿಲ್ಲ. ನನಗೆ 1990 ರಿಂದ 2009 ರವರೆಗೆ ವೇತನವನ್ನು ನಗದು ರೂಪದಲ್ಲೇ ಕೊಡುತ್ತಿದ್ದರು. ಸರ್ಕಾರಿ ನಿಯಮದ ಮೂಲಕ ಎಲ್ಲಾ ವಿದ್ಯಾ ಸಂಸ್ಥೆಗಳ ಬೊಧಕ ಮತ್ತು ಬೊದಕೇತರರಿಗೆ ಚೆಕ್ ಮೂಲಕವೇ ವೇತನ ನೀಡಬೇಕು ಎಂದು ನಿಯಮ ಇತ್ತು ಎಂದರೆ ಸರಿ. ನಮಗೆ ವೇತನವನ್ನು ಆರೋಪಿ ಕೊಡುತ್ತಿದ್ದರು. ಆರೋಪಿಯೇ ನಮಗೆ ವೇತನ ಕೊಡುತ್ತಿದ್ದರು ಎಂದು ತೋರಿಸಲು ದಾಖಲೆ ಇರುವುದಿಲ್ಲ. ಮಿಳಿಂದ ಸಂಸ್ಥೆ ಪ್ರಾರಂಭವಾದಾಗಿನಿಂದಲೂ ಅದರ ಹೆಸರಿನಲ್ಲಿ ಬ್ಯಾಂಕ್ ಖಾತೆ ಇತ್ತು ಎಂದರೆ ನನಗೆ ಗೊತ್ತಿಲ್ಲ ಆದರೆ 2009 ರಂದ ಬ್ಯಾಂಕ್ ಖಾತೆ ಇರುವುದು ನನಗೆ ಗೊತ್ತಿದ್ದೆ. ಬ್ಯಾಂಕ್ ಖಾತೆಯಲ್ಲಿ ವ್ಯವಹರಿಸಲು 2009 ರಿಂದ ಫಿರ್ಯಾದಿ ಗೋವಿಂದಯ್ಯ ನವರಿಗೆ ಅಧಿಕಾರ ಇತ್ತು. ಬೈಲಕುಪ್ಪೆಯ ಸಿಂಡಿಕೇಟ್ ಬ್ಯಾಂಕ್ ನಲ್ಲಿ ಮಾತ್ರ ಮಿಳಿಂದ ಶಾಲೆಯ ಖಾತೆ ಇತ್ತು. ಮಿಳಿಂದ ಶಾಲೆಯ ಹಣ ಕಾಸೀನ ವ್ಯವಹಾರಗಳನ್ನು 2009 ರವರೆಗೆ ಅಡಿಟ್ ಮಾಡಿಸಿದ್ದಾರೆ ಎಂದರೆ ಗೊತ್ತಿಲ್ಲ. ಮಿಳಿಂದ ಶಾಲೆ ಪ್ರಾರಂಭವಾದ ಕಾಲದಿಂದಲೂ 2009 ರವರೆಗೆ ಆರೋಪಿಯ ವಿರುದ್ಧ ಹಣ ಕಾಸು ದುರುಪಯೋದ ಆರೋಪ ಇರಲಿಲ್ಲ. 2009 ರ ನಂತರ ನಮ್ಮ ವೇತನವನ್ನು ಬ್ಯಾಂಕ್ ಮೂಲಕ ಪಾವತಿಸುತ್ತಿದ್ದರು.

ಧರ್ಮದರ್ಶಿ ಮಂಡಳಿಯವರು ಶಾಲಾ ಅಭಿವೃದಿ ಬಗ್ಗೆ ಆಗಿಂದಾಗೆ ಮೀಟಿಂಗ್ ಸೇರುತ್ತಿದ್ದುದು 2009 ರ ನಂತರ ನನಗೆ ತಿಳಿಯಿತು. ನಿ.ಪಿ.8 ರಲ್ಲಿ ಗುರುತಿಸಿರುವ ದಾಖಲೆ ಪ್ರಕಾರ ನಡೆದಿರುವ ಮೀಟಿಂಗ್‌ಗೆ ನಾನು ಕೂಡ ಹಾಜರು ಆಗಿದ್ದೆ, ಆದ್ದರಿಂದ ಸಹಿ ಮಾಡಿದ್ದೇನೆ. ನಿ.ಪಿ.8 ಕ್ಕೆ ಆರೋಪಿ ಸಹಿ ಮಾಡಿಲ್ಲ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಅದಕ್ಕೆ ವ್ಯವಸ್ಥಾಪಕ ಧರ್ಮದರ್ಶಿಯಾಗಿದ್ದ ಫಿರ್ಯಾದಿ ಗೋವಿಂದಯ್ಯ ರವರು ಸಹಿ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ಸ್ವತಃ ಹೇಳುವುದೇನೆಂದರೆ ಸದರಿ ದಾಖಲೆಯನ್ನು ಆರೋಪಿ ನನ್ನ ಕೈಗೆ ಕೊಟ್ಟು ವಾಪಸ್ಸು ತೆಗೆದುಕೊಂಡು ಹೋದರು ಎಂದು ಗುರುತಿಸಿದ ಮೇರೆಗೆ **ನಿ.ಡಿ.28** ಎಂದು ಗುರುತಿಸಲಾಯಿತು. ಗೋವಿಂದಯ್ಯನವರು ಸಹಿ ಮಾಡಿರುವ ದಾಖಲೆಯನ್ನು ವಾಪಸ್ಸು ಕೊಡುವುದಿಲ್ಲ ಎಂದು ಆರೋಪಿಗೆ ಹೇಳಬಹುದಾಗಿತ್ತಲ್ಲವೇ ಎಂದರೆ ಸರಿ, ಆದರೆ ಆ ರೀತಿ ಹೇಳಲು ಆಗುವುದಿಲ್ಲ. ನಿ.ಪಿ.28 ರಲ್ಲಿ ಗುರುತಿಸಿರುವ ದಾಖಲೆಯ ಮೇರೆಗೆ ನಾನು ಮಿಳಿಂದ ವಿದ್ಯಾ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ನಿ.ಪಿ.6(ಎ) ರಲ್ಲಿ ಇರುವ ಸಹಿಯನ್ನು ಸಾಕ್ಷಿಯೇ ನೋಡಿ ಅದು ಫಿರ್ಯಾದಿ ಗೋವಿಂದಯ್ಯ ರವರ ಸಹಿಯೇ ಅಥವಾ ಅಲ್ಲವೆಂದು ಎಂದು ಗೊತ್ತಾಗುತ್ತಿಲ್ಲ. ನಿ.ಪಿ.6(ಎ) ಕೆಳಗೆ ಇರುವ ಸಹಿ ಆರೋಪಿಯ ಸಹಿಯೇ ಎಂದರೆ ನನಗೆ ಗೊತ್ತಾಗುವುದಿಲ್ಲ. ನಿ.ಪಿ.6 ರ ಪ್ರಕಾರ ಶಾಲಾ ಶಿಕ್ಷಕರೆಲ್ಲರು ಸ್ವಯಂ ಪ್ರೇರಿತವಾಗಿ ಶಾಲಾ ವಾಹನ ಖರೀದಿಸಲು ವಂತಿಕೆ ಕೊಡಲು ಠರಾವು ಮಾಡಿದ್ದಾರೆ ಎಂದು ಸರಿಯಲ್ಲ. ಅವರು ಕೇಳಿದ್ದರಿಂದ ನಾವು ಮಾಡಿದ್ದೇವೆ. ದಿನಾಂಕಃ 13-06-2006 ರಂದು ರೂ.1,75,000/- ಶಾಲಾ ವಾಹನ ಖರೀದಿಸುವ ಸಲುವಾಗಿ ಮೈಸೂರಿನ ಬ್ಯಾಂಕ್ ಆಫ್ ಮಹಾರಾಷ್ಟ್ರ ರಲ್ಲಿ ಜಮಾ ಮಾಡಲಾಗಿದೆ ಎಂದರೆ ಸರಿ. ಸದರಿ ಬ್ಯಾಂಕ್ ನಲ್ಲಿ ವ್ಯವಸ್ಥಾಪಕ ಧರ್ಮದರ್ಶಿ ಗೋವಿಂದಯ್ಯ ರವರ ಹೆಸರಿನಲ್ಲಿ ಖಾತೆ ತೆರೆಯಲಾಗಿದೆ ಎಂದರೆ ಗೊತ್ತಿಲ್ಲ. ಗೋವಿಂದಯ್ಯ ರವರ ಮಾತು ಕೇಳಿ ಆರೋಪಿ ಕೈಗೆ ರೂ.99,500/- ರೂಪಾಯಿಗಳನ್ನು ಕೊಟ್ಟಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.19 ರಲ್ಲಿ ಗುರುತಿಸಿರುವ ದಾಖಲೆಯನ್ನು ವ್ಯವಸ್ಥಾಪಕ ಧರ್ಮದರ್ಶಿಯವರಿಗೆ ಬರೆದಿದ್ದೇವೆ ಅದರಲ್ಲಿ ದಿನಾಂಕ ನಮೂದಿಸಿಲ್ಲ.

ಆ ದಾಖಲೆಯಲ್ಲಿ ದಿನಾಂಕ ನಮೂದಿಸಬೇಕಾಗಿತ್ತು ಎಂದರೆ ಸರಿ. ಗೋವಿಂದಯ್ಯ ರವರ ಅಪೇಕ್ಷೆಯಂತೆ ನಿ.ಪಿ.19ರ ದಾಖಲೆಯಂತೆ ಸೃಷ್ಟಿ ಮಾಡಿರುವುದರಿಂದ ಅದರಲ್ಲಿ ದಿನಾಂಕ ಬರೆದಿಲ್ಲ ಎಂದರೆ ಸರಿಯಲ್ಲ. ನಿ.ಪಿ.19 ರಲ್ಲಿ ಗುರುತಿಸಿರುವ ದಾಖಲೆಯಲ್ಲಿ ಇರುವ ವಿಷಯಗಳಿಗೆ ಸಂಬಂಧಿಸಿದಂತೆ 2008-2009 ರಲಿಸ್ಲಿ ಬರೆದಿದ್ದೇವೆ. ಶಾಲಾ ವಾರ್ಷಿಕೊತ್ಸವ ಮತ್ತು ಕ್ರಿಕೆಟ್ ಪಂದ್ಯಾವಳಿಗಾಗಿ ಹಣ ಸಂಗ್ರಹಿಸುವಂತೆ ಆರೋಪಿ ನಮಗೆ ಹೇಳಿರಲ್ಲಿ ಎಂದರೆ ಸರಿಯಲ್ಲ. ಹಣ ಸಂಗ್ರಹಿಸುವಂತೆ ಆರೋಪಿ ನಮಗೆ ಮೌಖಿಕವಾಗಿ ಹೇಳಿದರು, ದಾಖಲೆ ಇರುವುದಿಲ್ಲ. ನಾವು ಶುಲ್ಕವನ್ನು ಸಂಗ್ರಹಿಸಿ ಆರೋಪಿಗೆ ಕೊಡುತ್ತಿದ್ದೇವೆ ಎಂದು ತೋರಿಸಲು ನಿ.ಪಿ.20(ಎಂ) ಹಾಜರು ಪಡಿಸಿದ್ದೇನೆ. ನಮ್ಮಿಂದ ಹಣ ಪಡೆದುಕೊಂಡಿರುವ ಬಗ್ಗೆ ಆರೋಪಿಯಿಂದ ನಾವು ದಾಖಲೆ ಪಡೆದುಕೊಂಡಿಲ್ಲ. ನಿ.ಪಿ.20(ಎಂ) ರಲ್ಲಿ ಆರೋಪಿಯ ಸಹಿ ಇರುವುದಿಲ್ಲ. ಗೋವಿಂದಯ್ಯ ರವರ ಅಪೇಕ್ಷೆಯಂತೆ ಅವರು ಮತ್ತು ನಾವು ಸೇರಿಕೊಂಡು ನಿ.ಪಿ.20(ಎಂ) ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಅಡಿಟ್ ವರದಿ ಪ್ರಕಾರ ಆರೋಪಿ ಮಿಳಿಂದ ವಿದ್ಯಸಂಸ್ಥೆಯ ಹಣ ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ಕಂಡು ಬಂದಿದೆಯೇ ಎಂದರೆ ನನಗೆ ಗೊತ್ತಿಲ್ಲ. ಈ ವಿಷಯ ನನಗೆ ಗೊತ್ತಿದ್ದರು ಸಹಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಣ ದುರುಪಯೋಗದ ಬಗ್ಗೆ ವಿಚಾರಣಾಧಿಕಾರಿ ನೇಮಿಸಬೇಕು ಎಂಬುದರ ಬಗ್ಗೆ ನನ್ನ ಗಮನಕ್ಕೆ ಬಂದಿದೆ ಆದರೆ ಅದು ಯಾವ ವರ್ಷದಲ್ಲಿ ತೀರ್ಮಾನವಾಗಿದೆ ಅಂತ ಗೊತ್ತಿಲ್ಲ. ವಿಚಾರಣಾಧಿಕಾರಿ ಮುಂದೆ ನಾನು ಹೇಳಿಕೆ ಕೊಟ್ಟಿಲ್ಲ. ಗೋವಿಂದಯ್ಯ ರವರ ಚಿತಾವಣೆ ಮೇರೆಗೆ ಹಣ ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

***( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೇ.ಕೇ.ಸರಿ. ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***
***ಪಿರಿಯಾಪಟ್ಟಣ.***